**ದಿನಾಂಕಃ 26.09.2019 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಕೆ.ಎಂ ವಕೀಲರಿಂದಃ–**

ಕ್ರಯ ಕರಾರು ಪತ್ರ ಯಾರು ಯಾರು ಬರೆದುಕೊಟ್ಟಿದ್ದಾರೆ ಎಂದು ಕೇಳಲಾಗಿ ಸಾಕ್ಷಿ ಗುಂಡಪ್ಪ, ಮಹಲಿಂಗಪ್ಪ, ರಾಮಕೃಷ್ಣಪ್ಪ ಮತ್ತು ನಾಗರಾಜ್ ಎಂದು ಹೇಳುತ್ತಾರೆ. ಇದರ ಮಾತುಕತೆ ದಿನಾಂಕಃ23.11.2009 ರಂದು ಬೆಂಗಳೂರಿನಲ್ಲಿ ಆಗಿದೆ ಎಂದು ಹೇಳುತ್ತಾರೆ. ಬೆಂಗಳೂರಿಗೆ ನಾನು, ಕರಿಯಣ್ಣ, ಹೆಚ್.ಡಿ. ಗಂಗಾಧರ ಮತ್ತು ರಾಮಕೃಷ್ಣಪ್ಪ ದಿನಾಂಕಃ23.11.2009 ಕ್ಕೆ ಹೋಗಿದ್ದೆವು. ಬೆಂಗಳೂರಿಗೆ ಸಾಯಂಕಾಲ 04.30–05.00 ಗಂಟೆಗೆ ಹೋಗಿದ್ದೆವು. ಬೆಂಗಳೂರಿನಲ್ಲಿ ಮಹಲಿಂಗಪ್ಪನವರ ಮನೆಗೆ ಹೋಗಿದ್ದೆವು.

ದಿನಾಂಕಃ23.11.2009 ಕ್ಕಿಂತ ಮುಂಚೆ ಇದರ ಬಗ್ಗೆ ಮಾತುಕತೆಯಾಗಿತ್ತಾ ಎಂದರೆ ಸಾಕ್ಷಿ ಮಾತುಕತೆಯಾಗಿರಲಿಲ್ಲ ಆದರೆ ಅವರು ನನ್ನ ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳಿ ಎಂದು ನನಗೆ ಒತ್ತಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ರಾಮಕೃಷ್ಣಪ್ಪ ಒತ್ತಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಮೇಲೆ ಹೇಳಿದ ನಾವು ನಾಲ್ಕು ಜನ ಹೊರತುಪಡಿಸಿ, ಮಹಲಿಂಗಪ್ಪನವರ ಮನೆಯವರು ಮತ್ತು ಅವರ ಮಕ್ಕಳು ಮತ್ತು ಬಳೇಗೌಡ ಇದ್ದರು ಎಂದು ಹೇಳುತ್ತಾರೆ. ಅಲ್ಲಿ ಏನು ಮಾತುಕತೆಯಾಯಿತು ಎಂದು ಕೇಳಲಾಗಿ ಸಾಕ್ಷಿ ಜಮೀನು ಒಳ್ಳೆಯದಿರಲಿಲ್ಲ, ನಾನು ಬೇಡ ಎಂದು ಹೇಳಿದ್ದೆ, ಆದರೂ ಅವರು ಹೆಚ್ಚು–ಕಡಿಮೆ ಮಾಡಿ ಕೊಡುತ್ತೇವೆ ಎಂದು ಹೇಳಿದ್ದರಿಂದ ಮಾತುಕತೆಯಲ್ಲಿ ಒಂದು ಎಕರೆಗೆ ರೂ.38,500/– ಕ್ಕೆ ಮಾತುಕತೆಯಾಯಿತು ಎಂದು ಹೇಳುತ್ತಾರೆ. ಎಷ್ಟು ಗಂಟೆ ಮಾತುಕತೆಯಾಯಿತು ಎಂದರೆ ಸಾಕ್ಷಿ ಸಂಜೆ 07.00 ಗಂಟೆಗೆ ಮಾತುಕತೆಯಾಗಿರುತ್ತದೆ, ಆದರೆ ಎಷ್ಟು ಗಂಟೆ ಮಾತುಕತೆಯಾಯಿತು ಎಂದು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

ಆ ದಿನ ಬರವಣಿಗೆಯಾಗಿರುತ್ತದೆ. ಸದರಿ ಕರಾರು ಛಾಪಾಕಾಗದದ ಮೇಲೆ ಬರೆಯಲಾಗಿದೆ. ಸದರಿ ಛಾಪಾಕಾಗದವನ್ನು ಹಿರಿಯೂರಿನ ಮೈಸೂರು ಬ್ಯಾಂಕ್‌ನಲ್ಲಿ ಬೆಳಗ್ಗೆ 11.00–

12.00 ಗಂಟೆ ಸಮಯದಲ್ಲಿ ದಿನಾಂಕಃ23.11.2009 ರಂದು ತೆಗೆದುಕೊಂಡಿರುತ್ತೇನೆ. ಸದರಿ ಛಾಪಾಕಾಗದ ರೂ.100/- ಮುಖಬೆಲೆಯದ್ದಾಗಿದೆ. ಸದರಿ ಛಾಪಾಕಾಗದ ಯಾರು ತೆಗೆದುಕೊಂಡು ಬಂದರು ಎಂದು ಕೇಳಲಾಗಿ ಸಾಕ್ಷಿ ಹೆಚ್.ಡಿ. ಗಂಗಾಧರ ಮತ್ತು ರಾಮಕೃಷ್ಣ ತೆಗೆದುಕೊಂಡು ಬಂದರು, ನಾನು ಮತ್ತು ಕರಿಯಣ್ಣ ಬ್ಯಾಂಕ್‌ನ ಹೊರಗೆ ಇದ್ದೆವು ಎಂದು ಹೇಳುತ್ತಾರೆ.

ಸದರಿ ಕ್ರಯ ಕರಾರು ಪತ್ರವನ್ನು ಬರವಣಿಗೆ ಮಾಡಿದವರು ಹೆಚ್.ಡಿ.ಗಂಗಾಧರಪ್ಪ. ಬರವಣಿಗೆ ಮಾಡುವ ಕಾಲಕ್ಕೆ ನಾನು, ಹೆಚ್.ಡಿ.ಗಂಗಾಧರಪ್ಪ, ಮಹಲಿಂಗಪ್ಪ, ರಾಮಕೃಷ್ಣಪ್ಪ ಮತ್ತು ಗುಂಡಪ್ಪ ಇದ್ದೆವು ಎಂದು ಹೇಳುತ್ತಾರೆ. ಸಾಕ್ಷಿದಾರರಾಗಿ ಹೆಚ್.ಡಿ. ಗಂಗಾಧರ ಮತ್ತು ಕರಿಯಣ್ಣ ಎಂಬುವವರು ಇದ್ದರು. ಮಹಲಿಂಗಪ್ಪನವರ ಹೆಣ್ಣುಮಕ್ಕಳನ್ನು ಸಾಕ್ಷಿದಾರರಾಗಿ ಸಹಿ ಹಾಕಿ ಎಂದು ನೀವು ಕೇಳಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ಕ್ರಯ ಕರಾರು ಪತ್ರಕ್ಕೆ ನಾಲ್ಕೂ ಜನ ಸಹಿ ಹಾಕಿದ್ದಾರೆ ಎಂದು ದಾವೆ ಹಾಕಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಸಹಿ ಹಾಕಿದ್ದಾರೆ. ಸಾಕ್ಷಿ ಮುಂದುವರಿದು ನಾಗರಾಜ್‌ರವರು ಸದರಿ ಕ್ರಯ ಕರಾರು ಪತ್ರಕ್ಕೆ ನನಗೆ ಒಪ್ಪಿಗೆ ಇದೆ, ನಾನು ನೋಂದಾಯಿತ ಕ್ರಯ ಪತ್ರ ಮಾಡಿಕೊಡುತ್ತೇನೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಾಗರಾಜಪ್ಪನವರನ್ನು ಕರೆದುಕೊಂಡು ಬಂದು ಸಹಿ ಮಾಡಿಸುತ್ತೇವೆ ಎಂದು ಹೇಳಲು ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಇವರಿಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಅವರು ಸಹಿ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ.

ಸದರಿ ದಿನದಂದು ರೂ.2,31,000/- ಹಣ ಕೊಟ್ಟಿದ್ದೆ. ಸದರಿ ಹಣ ನಿಮ್ಮ ಹತ್ತಿರ ಹೇಗೆ ಬಂತು ಎಂದು ಕೇಳಲಾಗಿ ಸಾಕ್ಷಿ ನಾನು ದಾಳಿಂಬೆ, ಈರುಳ್ಳಿ, ತಂಬಾಕು ಮಾರಾಟ ಮಾಡಿದ ಹಣ ನನ್ನ ಬಳಿ ಇತ್ತು ಎಂದು ಹೇಳುತ್ತಾರೆ. ಸದರಿ ಬೆಳೆ ನಿಮ್ಮ ಜಮೀನಿನಲ್ಲಿ ಬೆಳೆದಿದ್ದಿರಿ ಮತ್ತು ಅದರಿಂದ ಆದಾಯ ಬಂದಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಿಮಗೆ ಸೇರಿದ ಎರಡು ಜಮೀನುಗಳು ಇವೆ. ಅವುಗಳ ಸರ್ವೆ ನಂಬರ್ಃ69 ರಲ್ಲಿ 1 ¾ ಎಕರೆ

ಇರಬಹುದು ಎಂದು ಹೇಳುತ್ತಾರೆ. ಮತ್ತೊಂದು ಸರ್ವೆ ನಂಬರ್‌:75 ಇರಬಹುದು ಎಂದು ಹೇಳುತ್ತಾರೆ. ಅದರಲ್ಲಿ 1 ಎಕರೆ 20 ಗುಂಟೆ ಇರಬಹುದು ಎಂದು ಹೇಳುತ್ತಾರೆ. 2009 ರಲ್ಲಿ ನಿಮಗೆ ಜಮೀನನ್ನು ಕ್ರಯಕ್ಕೆ ಪಡೆದುಕೊಳ್ಳಲು ಆರ್ಥಿಕ ಸ್ಥಿತಿ ಚೆನ್ನಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ಆ ದಿನ ಕೊಟ್ಟಂತಹ ಹಣದ ಮುಖಬೆಲೆ ರೂ.1,000/- ಮುಖಬೆಲೆಯ 100 ನೋಟುಗಳನ್ನು ಕೊಟ್ಟಿದ್ದೇನೆ. ರೂ.500/- ಮುಖಬೆಲೆಯ 200 ನೋಟುಗಳನ್ನು ಕೊಟ್ಟಿದ್ದೇನೆ. 100/- ಮುಖಬೆಲೆಯ 310 ನೋಟುಗಳನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸದರಿ ಹಣ ನನ್ನ ಮನೆಯಲ್ಲಿತ್ತು ಎಂದು ಹೇಳುತ್ತಾರೆ. ಸದರಿ ಹಣವನ್ನು ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಇವರಿಗೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ.

ಸದರಿ ಕ್ರಯ ಕರಾರು ಪತ್ರ ಸರ್ವೆ ನಂಬರ್‌:134 ರಲ್ಲಿ 6 ಎಕರೆ 6 ಗುಂಟೆಗೆ ಆಗಿರುತ್ತದೆ. ಮಾತುಕತೆ ಸಮಯದಲ್ಲಿ ಈ ಜಮೀನಿಗೆ ಸಂಬಂಧಿಸಿದಂತೆ ಏನು ದಾಖಲೆ ತಂದಿದ್ದರು ಎಂದು ಕೇಳಲಾಗಿ ಸಾಕ್ಷಿ ಪಹಣಿಗಳನ್ನು ಮಾತ್ರ ತಂದಿದ್ದರು ಎಂದು ಹೇಳುತ್ತಾರೆ. 2002-03 ರಲ್ಲಿ ಸದರಿ ಜಮೀನಿನ ಮೇಲೆ ಹರಿಯಬ್ಬೆ ಸಿಜಿಬಿ ಬ್ಯಾಂಕ್‌ನಿಂದ ರೂ.3,19,000/- ಸಾಲವನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪಹಣಿಯನ್ನು ನಾನು ನೋಡಿದ್ದೇನೆ, ಅದರೆ ಸಾಲ ಇದ್ದ ಬಗ್ಗೆ ನಾನು ನೋಡಿಲ್ಲ ಎಂದು ಹೇಳುತ್ತಾರೆ.

ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಇವರಿಗೆ ಅಕ್ಕ-ತಂಗಿಯರು ಇದ್ದರು, ಅವರನ್ನು ಕರೆಸಿ ಸಹಿ ಮಾಡಿಸಲು ಹೇಳಿದ್ದಿರಾ ಎಂದರೆ ಸಾಕ್ಷಿ ನಾನು ಕೇಳಿರುವುದಿಲ್ಲ, ಅವರೂ ಸಹ ಹೇಳಿರುವುದಿಲ್ಲ, ಅವರ ಮದುವೆಯಾಗಿ ಬಹಳ ವರ್ಷಗಳಾಗಿವೆ ಎಂದು ಹೇಳುತ್ತಾರೆ. ಸದರಿ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುವುದರಿಂದ ಈ ಮೂರು ಜನರಿಗೆ ಅಂದರೆ ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ರವರಿಗೆ ಮಾತ್ರ ಆಸ್ತಿ ಮಾರಾಟ ಮಾಡಲು ಯಾವುದೇ ಹಕ್ಕು, ಅಧಿಕಾರ ಇಲ್ಲ

ಎಂದರೆ ಸಾಕ್ಷಿ ಮೂರೂ ಜನ ಅಲ್ಲ ನಾಲ್ಕೂ ಜನ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ.

ಸಂಪೂರ್ಣ ಹಣ ಕೊಟ್ಟಿದ್ದೀರಾ, ಆ ದಿನ ಕ್ರಯಪತ್ರ ಮಾಡಿಸಿಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ, ಸಾಕ್ಷಿ ಮುಂದುವರಿದು ನಾವು ಅಣ್ಣ-ತಮ್ಮಂದಿರು ಪಾಲುವಿಭಾಗ ಮಾಡಿಕೊಂಡು ನಿನ್ನ ಹೆಸರು ಹಚ್ಚುತ್ತೇವೆ ಎಂದು ಹೇಳಿದ್ದರಿಂದ ಕ್ರಯ ಕರಾರು ಪತ್ರ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಿಪಿ-31 ಕ್ರಯ ಕರಾರು ಪತ್ರ ಸಾಕ್ಷಿಗೆ ತೋರಿಸಿ, ಸದರಿ ಪುಟಕ್ಕೆ ಅಷ್ಟರಲ್ಲಿ ಹೊಂದಾಣಿಕೆಯಾಗುವ ಹಾಗ ಬರೆದು ಸೃಷ್ಠಿ ಮಾಡಿ ಬರೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ-31 ರಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸಾಕ್ಷಿ ಪತ್ರ ತೆಗೆದುಕೊಂಡ ದಿನಾಂಕ ಇದೆ ಎಂದು ಹೇಳುತ್ತಾರೆ.

ನಿಪಿ-31 ನ್ನು ಬರವಣಿಗೆ ಮಾಡಲು ಎಷ್ಟು ಸಮಯ ಬೇಕಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕಃ23.11.2009 ರಲ್ಲಿ ಬೆಂಗಳೂರಿಗೆ ಹೋಗಿದ್ದೆವು, ಕ್ರಯ ಕರಾರು ಪತ್ರ ಆಯಿತು, ಮೂರು ಜನರಿಗೆ ಹಣ ಕೊಟ್ಟೆ, ಸದರಿ ಮೂರು ಜನ ಅಂದರೆ ಗುಂಡಪ್ಪ, ಮಹಲಿಂಗಪ್ಪ ಮತ್ತು ರಾಮಕೃಷ್ಣಪ್ಪ ಸಹಿ ಮಾಡಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿದಾರರಾಗಿ ಹೆಚ್.ಡಿ.ಗಂಗಾದರಪ್ಪ ಮತ್ತು ಕರಿಯಣ್ಣ ಇದ್ದರು, ಅವರ ಸಮಕ್ಷಮ ಈ ಕ್ರಯ ಕರಾರು ಪತ್ರ ಆಯಿತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ನಿಪಿ-31 ನ್ನು ಪ್ರತಿವಾದಿಗಳು ನಿಮಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-31 ಕ್ರಯ ಕರಾರು ಪತ್ರದ ಮೇಲೆ 2 ಮತ್ತು 3 ನೇ ಪ್ರತಿವಾದಿಗಳ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಅವಶ್ಯಕತೆ ಪ್ರತಿವಾದಿಗಳಿಗೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಮಗೆ ಮಾರಾಟ ಮಾಡಲು ಒಪ್ಪಿಕೊಂಡಿರುವುದಿಲ್ಲ ಮತ್ತು ನಿಮ್ಮಿಂದ ಯಾವುದೇ ಹಣವನ್ನು ಪ್ರತಿವಾದಿಗಳು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.